

ರತ್ನಗಂಬಳಿ ಹಾಸಿದ ದಿವಾನಖಾನೆ



ಮಿನಾರಿನ ಚಿತ್ರದ ಕುಶಲ ನೇಯ್ಗೆ

ರೇಷ್ಮೆಸಾಕಣೆ, ಕುರಿಸಾಕಣೆ, ನೇಕಾರಿಕೆ, ವ್ಯಾಪಾರಗಳ ನಾಲ್ಕು ಚುಕ್ಕಿಗಳನ್ನು ಅದ್ಭುತವಾಗಿ ಒಗ್ಗೂಡಿಸಿದ್ದವು. ಇವು ಆಯಾ ದೇಶದ ಚಿತ್ರಕಲೆಗೆ ಕ್ಯಾನ್‌ವಾಸುಗಳೂ ಆಗಿದ್ದವು. ಇವು ಕುಶಲಕರ್ಮಿಗಳ ಕಲ್ಪನೆ, ಸಂಸ್ಕೃತಿ ಪ್ರಜ್ಞೆ, ಕರಾರುವಾಕ್ಕಾದ ಗಣಿತಜ್ಞಾನ, ಚಿತ್ರಕಲಾ ಪ್ರತಿಭೆ ಮತ್ತು ನೇಕಾರಿಕೆಯ ಕಸುಬುದಾರಿಕೆಗಳ ಮೂಲಕ ಸೃಷ್ಟಿಯಾಗಿದ್ದವು. ಕೆಲವು ಕಂಬಳಿಗಳು ರತ್ನದ ದೀಪಗಳನ್ನು ಹಚ್ಚಿಟ್ಟ ಅಂಗಳದಂತಿದ್ದವು. ಕೆಲವು ಚಿನ್ನದ ಒಡವೆಗಳನ್ನು ಚಾಪೆಯ ಮೇಲೆ ಹರಡಿದಂತಿದ್ದವು. ಕೆಲವುಗಳಲ್ಲಿ ಫಾರಸಿ ಕವಿಗಳ ಕಾವ್ಯದ ಚರಣಕ್ಕೆ ಭಿತ್ತಿ ಒದಗಿಸಿದ್ದವು. ಗಾತ್ರದಲ್ಲಿ ಕೆಲವು ಕಾಲೊರೆಸಿನಷ್ಟು ಚಿಕ್ಕವಾಗಿದ್ದರೆ, ಮತ್ತೆ ಕೆಲವು ಸಭಾಭವನಕ್ಕೆ ಅಥವಾ ಮಸೀದಿಗೆ ಹಾಸುವಷ್ಟು ಹರಹಾಗಿದ್ದವು. ಮಶಾದ್ ಮ್ಯೂಸಿಯಮ್ಮಿನಲ್ಲಿ ಇರಾನಿನಲ್ಲಿ ದೊರೆಗಳ ಹಾಗೂ ಆಧ್ಯಾತ್ಮಿಕ ನಾಯಕರ ಚಿತ್ರಗಳುಳ್ಳ ರತ್ನಗಂಬಳಿಗಳಿದ್ದವು. ಒಂದು ಕಂಬಳಿಯಲ್ಲಿ ಮುಸ್ಲಿಮರ ಯಾತ್ರಾ ಸ್ಥಳಗಳಾದ ಮಕ್ಕಾ, ಮದೀನ, ಜೆರುಸಲೆಂನ ಮಸೀದಿಗಳಿದ್ದವು. ಮೊಹರಮ್ಮಿಗೆ ಸಂಬಂಧಿಸಿದ ಕರ್ಬಲಾ, ನಜಫ್‌ಗಳ ಹುತಾತ್ಮರ ಸಮಾಧಿ ಕಟ್ಟಡಗಳ ಚಿತ್ರಗಳಿದ್ದವು. ಧಾರ್ಮಿಕ ಸನ್ನಿವೇಶವುಳ್ಳ ಚಿತ್ರಗಳುಳ್ಳ ರತ್ನಗಂಬಳಿಗಳನ್ನು ನೆಲಕ್ಕೆ ಹಾಸದೆ, ಕಿಟಕಿಯ ಪರದೆಗಳಾಗಿ ಅಥವಾ ಗೋಡೆನೇತುಗಳಾಗಿ ಬಳಸುವರು ಎಂದು ಕಾಣುತ್ತದೆ.

ಕೆಲವು ಕಂಬಳಿಗಳ ಮೇಲೆ ವಿಮಾನದಿಂದ ವಿಹಂಗಮ ನೋಟದಲ್ಲಿ ತೆಗೆದ ಪಟದಂತೆ, ಇರಾನಿನ ಪಾರಂಪರಿಕ ಊರುಗಳೂ, ಅಲ್ಲಿನ ಜೀವನಕ್ರಮವೂ ಚಿತ್ರಿತವಾಗಿದ್ದವು. ಜಿಂಕೆಬೇಟೆ, ವನವಿಹಾರ, ಹಬ್ಬಿದ ದ್ರಾಕ್ಷಿಬಳ್ಳಿ, ವಿಹರಿಸುವ ಪ್ರಾಣಿ–ಪಕ್ಷಿ, ನೇಗಿಲುಳುವ ರೈತರ ಸನ್ನಿವೇಶಗಳಿದ್ದವು. ಕಂಬಳಿಗೆ ಬೇಕಾದ ತುಪ್ಪಟವನ್ನು ಒದಗಿಸಿದ ಕುರಿಗಳು, ತಮ್ಮ ಮಾಲಕರ ಸಮೇತ ಚಿತ್ರಗಳಾಗಿ ಪ್ರವೇಶ ಪಡೆದಿದ್ದವು. ಮರುಭೂಮಿ ದೇಶಗಳಲ್ಲಿ ಕುರಿಗಾಹಿತನ ಪ್ರಮುಖ ಆರ್ಥಿಕತೆ ಕೂಡ. ರತ್ನಗಂಬಳಿಗಳಲ್ಲಿ ನವಿಲು, ಜಿಂಕೆ, ಹಕ್ಕಿ, ಕುದುರೆ, ಸಿಂಹಗಳು ಸಾಮಾನ್ಯವಾಗಿದ್ದವು. ಕಾಲ್ಪನಿಕ ಪಕ್ಷಿಯೊಂದು ತನ್ನ ನಾಲ್ಕು ಕಾಲುಗಳಲ್ಲಿ ಒಂದೊಂದು ಆನೆಯನ್ನು ಹಿಡಿದು ಹಾರುತ್ತಿತ್ತು. ಈ ಸನ್ನಿವೇಶವು ಭಾರತದ ಗುಡಿಗಳ ಭಿತ್ತಿಗಳಲ್ಲೂ ಕೆತ್ತಲ್ಪಟ್ಟಿದೆ. ಹೆಚ್ಚಿನ ರತ್ನಗಂಬಳಿಗಳಲ್ಲಿ ಮರದ ಮೇಲೆ ಸಭೆ ಸೇರಿರುವ ಹಕ್ಕಿಗಳು ಹಣ್ಣು ತಿನ್ನುತ್ತ ವಿಹರಿಸುತ್ತಿವೆ. ಹಕ್ಕಿಗಳು ಸೂರೆ ಹೊಡೆದಿರುವ ಖರ್ಜೂರದ ತೋಟಗಳನ್ನು ನೋಡಿದ್ದ ನಮಗಿದು ಉತ್ಪ್ರೇಕ್ಷೆ ಅನಿಸಲಿಲ್ಲ.

ಮಶಾದಿನ ಒಂದು ರತ್ನಗಂಬಳಿಯಲ್ಲಿ ಸಂಗೀತಗಾರರು ದುಂಡಗೆ ಕೂತು ವಾದ್ಯ ನುಡಿಸುವ ಸನ್ನಿವೇಶವಿತ್ತು. ಅವರ ಸುತ್ತಲೂ 12 ರಾಶಿಗಳಿಗೆ ಸಂಬಂಧಿಸಿದ ಪ್ರಾಣಿ, ಪಕ್ಷಿ, ವಸ್ತುಗಳ ಚಿಹ್ನೆಗಳಿದ್ದವು. ಭಾರತಕ್ಕೆ ಜನ್ಮರಾಶಿಗಳು ಇಲ್ಲಿಂದ ಬಂದವೊ ಭಾರತದಿಂದ ಹೋದವೊ ತಿಳಿಯದು. ಒಂದು ರತ್ನಗಂಬಳಿಯಲ್ಲಿ ಹೂದೋಟವಿದ್ದು, ಅದರಲ್ಲಿ ಕುಟುಂಬವೊಂದು ಹೊರಸಂಚಾರಕ್ಕೆ ಬಂದು, ಕೂಡುಭೋಜನ ಮಾಡುವಲ್ಲಿ ಮಗ್ನವಾಗಿತ್ತು. ಬೇಟೆಚಿತ್ರಗಳಲ್ಲಿ ಬೇಟೆಗಾರರು ಬಂಡಿಯಲ್ಲಿ ಚಿರತೆಯನ್ನು ಸರಪಳಿಯಲ್ಲಿ ಕಟ್ಟಿಹಾಕಿ ಒಯ್ಯುವ ಸನ್ನಿವೇಶವಿತ್ತು. ಕೆಲವೆಡೆ ಪರ್ಶಿಯನ್ ಕವಿಗಳ ಮತ್ತು ಸೂಫಿಗಳ ಜೀವನ ಪ್ರಸಂಗಗಳು ಇದ್ದವು. ಕೆಲವು ಕಂಬಳಿಗಳಲ್ಲಿ ಕುರಾನಿನ ಮಂತ್ರಗಳನ್ನು ನೇದು, ಅವುಗಳ ಸುತ್ತ ಚಿಟ್ಟೆ, ಹಕ್ಕಿ, ಹೂವು, ಬಳ್ಳಿಗಳನ್ನು ಬಿಡಿಸಲಾಗಿತ್ತು. ಬಳ್ಳಿ, ಹೂವು, ಎಲೆ, ಹಣ್ಣುಗಳಿಲ್ಲದ ಕಂಬಳಿಗಳೇ ಇಲ್ಲವೆನ್ನಬಹುದು. ಮರುಭೂಮಿಯ ನಾಡುಗಳು ರತ್ನಗಂಬಳಿಗಳಲ್ಲಿ ಹೂವು, ಹಕ್ಕಿ, ಚಿಟ್ಟೆ, ಮರಗಿಡ, ಹೂವು ಹಣ್ಣುಗಳನ್ನು ಸಮೃದ್ಧವಾಗಿ ಕಾಣಿಸಿದ್ದವು. ಕಲೆ ಕೇವಲ ವಾಸ್ತವದ ಪ್ರತಿಬಿಂಬವಲ್ಲ. ಇಲ್ಲದುದನ್ನು ಆವಾಹಿಸುವ ಕಲ್ಪನೆ–ಕನಸು ಕೂಡ.

ಬುಡಕಟ್ಟು ಸಮಾಜದ ವಿಗ್ರಹಾರಾಧಕ ಅರಬಸ್ತಾನವು ನಿರಾಕಾರವಾದಿ ದೈವಕಲ್ಪನೆಯ ಇಸ್ಲಾಮನ್ನು ಸ್ವೀಕರಿಸಿದ ಬಳಿಕ, ಚಿತ್ರಕಲೆ ಮತ್ತು ಶಿಲ್ಪಕಲೆಗಳನ್ನು ನಿಷೇಧಿಸಿಕೊಂಡಿತು. ಇದು ಸೃಷ್ಟಿಕರ್ತ ದೇವರ ಸೃಜನಶೀಲತೆಗೆ ಸವಾಲು ಹಾಕುವ ಕೆಲಸವೆಂದು ಪರಿಭಾವಿಸಿತು. ತನ್ನ ಸೃಜನಶೀಲತೆಗೆ ತಾನೇ ಕಟ್ಟು ಹಾಕಿಕೊಂಡಿತು. ಈ ಸೃಜನಶೀಲತೆ ವಾಸ್ತುಶಿಲ್ಪದಲ್ಲಿ ಸ್ವಚ್ಛಂದವಾಗಿ ಹೊಮ್ಮಿತು. ಆದರೆ ಅಗ್ನಿಪೂಜಕ ಸಂಸ್ಕೃತಿಯ ಹಿನ್ನೆಲೆಯ ಇರಾನ್ ಮತ್ತು ಅಝುರಬೈಜಾನುಗಳು, ಶಿಯಾ ಪಂಥೀಯ ದೇಶಗಳಾಗಿ, ಈ ವಿಷಯದಲ್ಲಿ ವಿಭಿನ್ನ ನಿಲುವು ತಾಳಿದವು. ಪರಂಪರಾಗತವಾಗಿ ಬಂದಿದ್ದ ತಮ್ಮ ಚಿತ್ರಕಲೆ, ಸಂಗೀತ, ಜೀವನಕ್ರಮಗಳನ್ನು ರತ್ನಗಂಬಳಿಗಳಲ್ಲಿ ಪ್ರಕಟಿಸಿದವು. ರತ್ನಗಂಬಳಿಯ ಕಸುಬುದಾರಿಕೆಯು ನೆಲಹಾಸುಗಳಿಗೆ ನಿಲ್ಲಲಿಲ್ಲ. ಕುದುರೆಯ ಬೆನ್ನಹಾಸು, ಅದರ ಹಸುಬೆಚೀಲ, ಸಂತರ ಸಮಾಧಿಗೆ ಹೊದಿಸುವ ಗಲೀಫ, ನಮಾಜಿಗೆ ಬಳಸುವ ಪ್ರಾರ್ಥನಾಹಾಸು, ಗಂಡಸರ ಕುಲಾವಿ, ಬಾಗಿಲ ಪರದೆಗಳಿಗೆ